## ಕೋರ್ಟ್ ಮೆಟ್ಟಿಲು

ಪಕ್ಕದಮನೆಯ ಪದ್ಮಮ್ಮ ಯಾವಾಗಲೂ ಹೇಳುತ್ತಿದ್ದರು – 'ಏನೇ ಆಗ್ಲಿ, ಕೋರ್ಟ್ ಮೆಟ್ಟಿಲು ಮಾತ್ರ ಹತ್ತಬ್ಯಾಡ್ರಿ' ಎಂದು. ಅವರ ಮನೆಯವರಿಗೆ ವರ್ಗಾವಣೆಯಾಗಿ ಬೇರೆ ಊರಿಗೆ ಹೋದರು. ಎಷ್ಟೋ ವರ್ಷಗಳ ಅನಂತರ ಅಚಾನಕ್ಕಾಗಿ ಅವರ ಮಗ ಶ್ರೀಪಾದ ಸಿಕ್ಕಿದ. ಆತನೇ ಗುರುತು ಹಿಡಿದು ಮಾತನಾಡಿಸಿ, ಮನೆಗೆ ಕರೆದುಕೊಂಡು ಹೋದ. ಅವರ ತಾಯಿ ಪದ್ಮಮ್ಮ ಖುಷಿಪಟ್ಟರು. ಮಾತು, ಚಹಾ, ಕುಶಲೋಪರಿ ಆದಮೇಲೆ, ಪದ್ಮಮ್ಮ ಅವರಿಗೆ, 'ಏನೇ ಹೇಳ್ರಿ, ನಿಮ್ಮ ಮಕ್ಕಳು ನಿಮ್ಮ ಮಾತು ಮೀರಿದ್ದು ನೋಡಿ ಬೇಸರವಾಯಿತು' ಎಂದೆ. ಅವರು ಆಶ್ಚರ್ಯದಿಂದ ನನ್ನನ್ನೇ ದಿಟ್ಟಿಸಿದರು. 'ನೀವೇ ಹೇಳ್ತಿದ್ರಿ, ಏನೇ ಆದ್ರೂ, ಕೋರ್ಟ್ ಮೆಟ್ಟಿಲು ಹತ್ತಬ್ಯಾಡ್ರಿ ಅಂತ... ಈಗ ನೋಡಿದ್ರೆ ನಿಮ್ಮ ಮಗ ದಿನಬೆಳಗಾದರೆ ಕೋರ್ಟ್ ಮೆಟ್ಟಿಲು ಹತ್ತುತ್ತಾರಂತೆ?' ಎಂದಾಗ ವಕೀಲನಾಗಿದ್ದ ಮಗ ಶ್ರೀಪಾದನೂ ಅವರ ತಾಯಿಯೂ ಒಟ್ಟಿಗೇ ನಕ್ಕರು.



**ರಾಮಕೃಷ್ಣ ಗೋಖಲೆ**

---



ಕಲೆ: ಗಣೇಶ ಆಚಾರ್ಯ

## 'ಯದ್ಭಾವಂ ತದ್ಭವತಿ...'

ನಮ್ಮ ಕಿರಿಯ ಮಗಳ ನಿಶ್ಚಿತಾರ್ಥ ಮುಗಿಸಿಕೊಂಡು ಮನೆಗೆ ಬಂದಾಗ ಗೇಟಿನ ಬಳಿ ಮನೆಯ ಮಾಲೀಕರು ಸಿಕ್ಕಿದರು. ಅವರು ರಾಜಸ್ಥಾನದವರು. ಕನ್ನಡ ಬರುತ್ತಿರಲಿಲ್ಲ. ಕಾರ್ಯಕ್ರಮ ಹೇಗಾಯ್ತು ಎಂದು ವಿಚಾರಿಸಿ, ನಮ್ಮ ಮಗಳಿಗೆ ಶುಭ ಕೋರಿದರು. ಅನಂತರ, 'ಬೇಟೀ ಪರಾಯೀ ಹೋ ಗಯೀ' (ಮಗಳು ಪರಕೀಯಳಾದಳು) ಎಂದರು. ಕೂಡಲೇ ಮಗಳು, 'ನಹೀಂ ಅಂಕಲ್, ವೋ ಅಪ್ನೇ ಹೋ ಗಯೇ' (ಅಲ್ಲ ಅಂಕಲ್, ಅವರು ನಮ್ಮವರಾದರು) ಎಂದಳು. ಆತ ಅವಾಕ್ಕಾದರು. ಸಾವರಿಸಿಕೊಂಡು, 'ಬರೋಬರ್... ಬರೋಬರ್...' ಅಂದರು. 'ಯದ್ಭಾವಂ ತದ್ಭವತಿ...' (ಭಾವಕ್ಕೆ ತಕ್ಕಂತೆ ಬದುಕು) ಎಂದುಕೊಂಡೆ.

**ಜಯಲಕ್ಷ್ಮಿ ಭಟ್**